1ಶೂನ್ಯ ವೇ.ಪ್ರ SL.N:-47 ದಿ:-13-03-2026

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಂ ನಾರಾಜು ಇವರು ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಿರುವ ಪ್ರಶ್ನೆಗೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.**

**ಸೂಚನೆ:-**

ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮ ದೇಶವ್ಯಾಪಿ ಉದ್ಭವಿಸಿರುವ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯ ಬುಧವಾರ ಮತ್ತಷ್ಟು ತೀವ್ರಗೊಂಡಿದೆ. ಸಿಲಿಂಡರ್ ಪೂರೈಕೆ ಕೊರತೆ ಪರಿಣಾಮ ದೇಶಾದ್ಯಂತ ಹೋಟೆಲ್, ಕ್ಯಾಂಟೀನ್, ಪಿಜಿ, ಕಲ್ಯಾಣ ಮಂಟಪಗಳಿಗೆ ಭಾರೀ ಹೊಡೆತ ಬಿದ್ದಿದೆ. ದೇಶವ್ಯಾಪಿ ಶೇ.20-30ರಷ್ಟು ಹೋಟೇಲ್‌ಗಳು ಬಂದ್ ಆಗಿದ್ದರೆ, ಬಹುತೇಕ ಕಡೆ ಊಟದ ಮೆನುವಿನಲ್ಲಿ ಬದಲಾವಣೆ ಮಾಡಲಾಗಿದೆ. ಇನ್ನು ರಾಜ್ಯದ ಬಹುತೇಕ ಜಿಲ್ಲೆಗಳಲ್ಲೂ ವಾಣಿಜ್ಯ ಸಿಲಿಂಡರ್ ಸಮಸ್ಯೆ ವ್ಯಾಪಕವಾಗಿದ್ದು, ಪೂರೈಕೆಯಲ್ಲಿ ಶೇ. 50ರಷ್ಟು ಕಡಿತವಾಗಿದೆ ಕೆಲ ಪಿಜಿ ಹಾಗೂ 30ಕ್ಕೂ ಹೆಚ್ಚು ಇಂದಿರಾ ಕ್ಯಾಂಟೀನ್‌ಗಳಲ್ಲಿ ಮಧ್ಯಾಹ್ನದ ಊಟಕ್ಕೆ ಕೊಕ್ ನೀಡಲಾಗಿದೆ.

ಸಿಲಿಂಡರ್ ಕೊರತೆಯ ಬಿಸಿ ಆಸ್ಪತ್ರೆಗಳಿಗೆ ದಾಖಲಾಗಿರುವ ರೋಗಿಗಳ ಮೇಲೂ ಬಿದ್ದಿದ್ದು, ರೋಗಗಳಿಗೆ ಪೂರೈಕೆಯಾಗುವ ಊಟದ ಮೆನುವಿಕೂ ಕತ್ತರಿ ಬಿದ್ದಿದೆ. ಇನ್ನು ಸಾಮೂಹಿಕ ಭೋಜನ ಸಿದ್ಧತೆಯ ಸಮಸ್ಯೆ ಎದುರಾಗಿರುವ ಹಿನ್ನೆಲೆಯಲ್ಲಿಲ ಕೆಲವೆಡೆ ವಿವಾಗಗಳೇ ಮುಂದೂಡಿಯಾಗಿದ್ದರೆ, ಕೆಲ ದೇವಸ್ಥಾನಗಳಲ್ಲಿ ನೀಡಿತ್ತಿದ್ದ ಉಚಿತ ಪ್ರಸಾದಕ್ಕೂ ಸಂಚಕಾರ ಎದುರಾಗಿದೆ" ಎಂದು ರಾಜ್ಯದ ಎಲ್ಲಾ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ರಾಜ್ಯದ ಹಲವಾರು ನಾಗರೀಕರು ಹೋಟೆಲ್ ಮತ್ತು ಇಂದಿರಾ ಕ್ಯಾಂಟೀನ್‌ನಲ್ಲಿ ನೀಡುವ ಊಟದ ಮೇಲೆ ಅವಲಂಬಿತರಾಗಿರುವುದರಿಂದ ಈ ಕುರಿತು ರಾಜ್ಯ ಸರ್ಕಾರವು ಸೂಕ್ತ ಕ್ರಮಕೈಗೊಂಡು ರಾಜ್ಯದಲ್ಲಿ ವಾಣಿಜ್ಯ ಸಿಲಿಂಡರ್ ಕೊರತೆಯಾಗದಂತೆ ಮತ್ತು ಕಾಳಸಂತೆಯಲ್ಲಿ ಎಲ್‌ಪಿಜಿ ಮಾರಾಟ ಮಾಡುವುದನ್ನು ತಡೆಗಟ್ಟಲು ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:-**

ರಾಜ್ಯ ಸರ್ಕಾರವು ಈಗಾಗಲೇ ಗ್ರಾಹಕರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕೆಳಕಂಡ ಸಮರ್ಪಕ ಕ್ರಮಗಳನ್ನು ಜರುಗಿಸುತ್ತಿದೆ:-

ದಿನಾಂಕ:09/03/2026ರ ಕೇಂದ್ರ ಸರ್ಕಾರದ ಆದೇಶಗಳನ್ವಯ ಎಲ್ಲಾ public sector OMC's ಗಳು ಸರಬರಾಜು ಮಾಡುವ ಎಲ್‌ಪಿಜಿ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಕೇವಲ ಗೃಹ ಬಳಕೆಯ ಗ್ರಾಹಕರಿಗೆ ಸರಬರಾಜು/ಮಾರಾಟವಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿರುತ್ತದೆ ಹಾಗೂ ಈ ಕೆಳಕಂಡ ಸೂಚನೆಗಳನ್ನು ಸಹ ನೀಡಿರುತ್ತದೆ :-

6) All domestic/SEZ oil refining companies including Petrochemical Complexes operating in India shall maximize and ensure that entire production of C3 and C4 streams including Propane, Butane, Propylene, etc being produced, recovered, fractionated or otherwise available with them in their refinery and petrochemical complexes is utilized for production of Liquefied Petroleum Gas (LPG) pool and make it available to the three Public sector OMCs viz. IOCL, HPCL and BPCL only.

7) All oil refining companies including their Petrochemical Complexes shall not divert, utilize, process, crack, convert or otherwise employ any of the streams as mentioned in Para 1 above for manufacture of petrochemical products or other such downstream derivatives.

8) All Public sector OMCs shall ensure that LPG so procured is supplied/marketed solely to consumers of domestic LPG only.

9) Any contravention of this Order shall attract action under the Essential Commodities Act, 1955 and the Petroleum Products (Maintenance of Production, Storage and Supply) Order, 1999, and any other applicable law for the time being in force.

10) This Order supersedes this Ministry's order of even number dated 05 March 2026. This order shall come into force with immediate effect and shall remain in force until further orders of the Central Government.

ಸನ್ಮಾನ್ಯ ಮುಖ್ಯಮಂತ್ರಿಯವರು, ಈಗಾಗಲೇ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಸಚಿವರಿಗೆ ಪತ್ರ ಬರೆದಿದ್ದು, ರಾಜ್ಯದ ಹಲವಾರು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್ ಸಂಘಗಳು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿ ಮಾಡಿವೆ ಮತ್ತು ಅನೇಕ ಸಂಸ್ಥೆಗಳು ಶೀಘ್ರದಲ್ಲೇ ಸರಬರಾಜುಗಳನ್ನು ಪುನಃಸ್ಥಾಪಿಸದಿದ್ದರೆ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಬಹುದು ಎಂದು ಕಳವಳ ವ್ಯಕ್ತಪಡಿಸುತ್ತಿವೆ. ಮಹಾನಗರಗಳಲ್ಲಿ ಪ್ರತಿದಿನ ಲಕ್ಷಾಂತರ ಜನರಿಗೆ ಸೇವೆ ಸಲ್ಲಿಸುವ ಸಣ್ಣ ರೆಸ್ಟೋರೆಂಟ್‌ಗಳು, ಮೆಸ್ ಸೌಲಭ್ಯಗಳು ಮತ್ತು ಅಡುಗೆ ಘಟಕಗಳ ದೊಡ್ಡ ಪರಿಸರ ವ್ಯವಸ್ಥೆ ಇದೆ. ತೈಲ ಮಾರುಕಟ್ಟೆ ಕಂಪನಿಗಳೊಂದಿಗೆ ನಡೆಸಿದ ಚರ್ಚೆಗಳ ಪ್ರಕಾರ, ರಾಜ್ಯದ ವಾಣಿಜ್ಯ ಎಲ್‌ಪಿಜಿ ಬೇಡಿಕೆಯನ್ನು ಸಾಂಪ್ರದಾಯಿಕವಾಗಿ ಮೂರು ಒಎಂಸಿಎಸ್-ಐಒಸಿಎಲ್ (ದಿನಕ್ಕೆ ಸುಮಾರು 500-550 ಮೆಟ್ರಿಕ್ ಟನ್), ಎಚ್‌ಪಿಸಿಎಲ್ (ದಿನಕ್ಕೆ ಸುಮಾರು 300 ಮೆಟ್ರಿಕ್ ಟನ್) ಮತ್ತು ಬಿಪಿಸಿಎಲ್ (ದಿನಕ್ಕೆ ಸುಮಾರು 230 ಮೆಟ್ರಿಕ್ ಟನ್) ಪೂರೈಕೆಯ ಮೂಲಕ ಬೆಂಬಲಿಸಲಾಗುತ್ತದೆ ಮತ್ತು ಈ ಪೂರೈಕೆಯಲ್ಲಿನ ಹಠಾತ್ ಅಡಚಣೆಯು ಈಗ ಹೋಟೆಲ್‌ಗಳು, ಅಡುಗೆ ಸಂಸ್ಥೆಗಳು ಮತ್ತು ಇತರ ವಾಣಿಜ್ಯ ಬಳಕೆದಾರರ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಅವುಗಳ ಕಾರ್ಯನಿರ್ವಹಣೆಗೆ ಯಾವುದೇ ಅಡಚಣೆ ಉಂಟಾದರೆ ಅದು ನಗರದ ದೈನಂದಿನ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ. ಕರ್ನಾಟಕ ರಾಜ್ಯವು OMCಗಳ ಎಲ್ ಪಿ ಜಿ ಉತ್ಪಾದನೆಯು ಗೃಹಬಳಕೆಯ ಗ್ರಾಹಕರಿಗೆ ಸಿಲಿಂಡರ್ ಸರಬರಾಜು ಮಾಡಲು ಆದ್ಯತೆ ಮತ್ತು ಗುರಿಯನ್ನು ಹೊಂದಿರುತ್ತದೆ, ರಾಜ್ಯದಲ್ಲಿರುವ ಮಹಾನಗರ ಪಾಲಿಕೆಗಳನ್ನು ಹೊಂದಿರುವ ನಗರಗಳಲ್ಲಿಯೂ ಸಹ ಈ ರೀತಿಯ ಚಟುವಟಿಕೆಗಳಿಗೆ ಅತೀವ ತೊಂದರೆಯಾಗಿರುತ್ತದೆ. ಈ ಸಮಸ್ಯೆಯು ತಮ್ಮ ಮನೆಗಳಿಂದ ದೂರ ವಾಸಿಸುವ ಮತ್ತು ನಿಯಮಿತ ಊಟಕ್ಕಾಗಿ ಹೋಟೆಲ್‌ಗಳು ಮತ್ತು ಮೆಸ್‌ಗಳನ್ನು ಅವಲಂಬಿಸಿರುವ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ಕೆಲಸ ಮಾಡುವ ವೃತ್ತಿಪರರ ಮೇಲೂ ಪರಿಣಾಮ ಬೀರುತ್ತದೆ. ಇದರ ಜೊತೆಗೆ, ಆಹಾರ ತಯಾರಿಕೆಗಾಗಿ ವಾಣಿಜ್ಯ LPG ಅನ್ನು ಅವಲಂಬಿಸಿರುವ ಚೌಲ್ಟ್ರಿಗಳು (ಮದುವೆ ಸಭಾಂಗಣಗಳು), ಹಾಸ್ಟೆಲ್‌ಗಳು ಮತ್ತು ಕಾರ್ಯಕ್ರಮ ಸ್ಥಳಗಳು ಸಹ ಅನಿಶ್ಚಿತತೆಯನ್ನು ಎದುರಿಸುತ್ತಿವೆ, ವಿಶೇಷವಾಗಿ ನಿಗದಿತ ಸಾಮಾಜಿಕ ಮತ್ತು ಸಮುದಾಯ ಕಾರ್ಯಕ್ರಮಗಳೊಂದಿಗೆ ಮಹಾನಗರಗಳಲ್ಲಿ ವಾಣಿಜ್ಯ ಎಲ್‌ಪಿಜಿಯ ಮೇಲಿನ ಅವಲಂಬನೆಯ ಪ್ರಮಾಣವನ್ನು ಗಮನಿಸಿದರೆ, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಛತ್ರಗಳು, ಸಮುದಾಯ ಭವನಗಳು ಮತ್ತು ಇತರ ಯಾವುದೇ ಶುದ್ಧ ವಾಣಿಜ್ಯ ಸಂಸ್ಥೆಗಳಿಗೆ ಸಾಕಷ್ಟು ವಾಣಿಜ್ಯ ಎಲ್‌ಪಿಜಿ ಪೂರೈಕೆ ಲಭ್ಯವಾಗುವಂತೆ ನೋಡಿಕೊಳ್ಳಲು ಮಧ್ಯಪ್ರವೇಶಿಸಬೇಕೆಂದು ವಿನಂತಿಸಿರುತ್ತಾರೆ. ಆದ್ದರಿಂದ, ವಾಣಿಜ್ಯ ಚಟುವಟಿಕೆ ನಡೆಯುತ್ತಿರುವ ಸ್ಥಳಗಳಾದ ಹೋಟೆಲ್, ರೆಸ್ಟೋರೆಂಟ್, ಛತ್ರಗಳು, ಮದುವೆ ಮಂಟಪಗಳು, ಸಮುದಾಯ ಭವನಗಳು, ಮೂರನೇ ವ್ಯಕ್ತಿಯ ಏಜೆನ್ಸಿಗಳಿಂದ ಉಸ್ತುವಾರಿ ಮಾಡುತ್ತಿರುವ/ಮೇಲ್ವಿಚಾರಣೆ ನಡೆಸುತ್ತಿರುವ ಖಾಸಗಿ ಆಸ್ಪತ್ರೆಗಳು, ಇತ್ಯಾದಿ ಸ್ಥಳಗಳಿಗೆ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳನ್ನು ಸರಬರಾಜು ಮಾಡಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಂಬಂಧ ಓಎಂಸಿ ಕಂಪನಿಗಳು ಮೇಲುಸ್ತುವಾರಿಯನ್ನು ವಹಿಸಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ

ಸರಬರಾಜಿನಲ್ಲಿ ಯಾವುದೇ ರೀತಿಯ ವ್ಯತ್ಯಯವಾಗದಂತೆ ಸೂಚಿಸಬೇಕೆಂದು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಸಚಿವರಿಗೆ ಪತ್ರದ ಮುಖಾಂತರ ಕೋರಿರುತ್ತಾರೆ.

ಅದೂ ಅಲ್ಲದೇ, ರಾಜ್ಯದ ಮಹಾನಗರ ಪಾಲಿಕೆಗಳೂ ಸೇರಿದಂತೆ ರಾಜ್ಯವ್ಯಾಪಿ ಎಲ್ಲಾ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಡೆಯುತ್ತಿರುವ ಸ್ಥಳಗಳಿಗೆ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಸರಬರಾಜು ಮಾಡುವಂತೆ ಸಂಬಂಧಿಸಿದ ಒಎಂಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದೂ ಸಹ ಸನ್ಮಾನ್ಯ ಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ ಇವರು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಸಚಿವರಿಗೆ ಪತ್ರದ ಮುಖಾಂತರ ಕೋರಿರುತ್ತಾರೆ.

ದಿನಾಂಕ:11/03/2026ರಂದು ಸನ್ಮಾನ್ಯ ಸಚಿವರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ತೈಲ ಕಂಪನಿಗಳ ಅಧಿಕಾರಿಗಳು (IOC, BPC, HPC & GAIL) ಸರ್ಕಾರದ ಕಾರ್ಯದರ್ಶಿ, ಆನಾಸ&ಗ್ರಾವ್ಯ ಇಲಾಖೆ, ಆಯುಕ್ತರು, ಆನಾಸ&ಗ್ರಾವ್ಯ ಇಲಾಖೆ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಗೃಹ ಉಪಯೋಗಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ಮತ್ತು ಗ್ರಾಹಕರಿಗೆ ಯಾವುದೇ ತೀವ್ರ ಸಮಸ್ಯೆ ಇಲ್ಲದ ಬಗ್ಗೆ ತೈಲ ಕಂಪನಿ ಅಧಿಕಾರಿಗಳಿಂದ ಖಾತ್ರಿಪಡಿಸಿಕೊಂಡಿರುತ್ತಾರೆ. ಕೊಲ್ಲಿ ರಾಷ್ಟ್ರಗಳ ಯುದ್ಧ ಸಂದರ್ಭದಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಸರಬರಾಜು ಕಡಿಮೆಯಾಗಿರುತ್ತದೆ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಗೃಹ ಉಪಯೋಗಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕ್ರಮವಹಿಸಲು ಎಲ್ಲಾ ತೈಲ ಕಂಪನಿ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿರುತ್ತಾರೆ. ಅನಿಲ ಸಿಲಿಂಡರ್‌ಗಳ ಸರಬರಾಜು ಕುರಿತು ಪ್ರತಿದಿನ ನಿಗಾವಹಿಸಿ ವಾರಕ್ಕೊಮ್ಮೆ ತೈಲ ಕಂಪನಿಗಳ ಅಧಿಕಾರಿಗಳು ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಸಭೆ ಕರೆದು ಪ್ರಗತಿ ಪರಿಶೀಲಿಸಲು ಸರ್ಕಾರದ ಕಾರ್ಯದರ್ಶಿಯವರಿಗೆ ಸೂಚನೆಯನ್ನು ನೀಡಿರುತ್ತಾರೆ.

ಈ ಸಂಬಂಧ ಮಾನ್ಯ ಸಚಿವರು ಪತ್ರಿಕಾಗೋಷ್ಠಿಯನ್ನು ನಡೆಸಿ, ರಾಜ್ಯದ ಎಲ್ಲಾ ಗ್ರಾಹಕರು ಎಲ್‌ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಮತ್ತು ಇದರಿಂದ ಮಾರುಕಟ್ಟೆಯಲ್ಲಿ ಕೃತಕ ಬೇಡಿಕೆ ಸೃಷ್ಟಿಯಾಗದಂತೆ, ಸಮರ್ಪಕವಾಗಿ ಎಲ್‌ಪಿಜಿ ಅನಿಲವನ್ನು ಸಮತೋಲನವಾಗಿ ಬಳಕೆ ಮಾಡಲು ತಿಳಿಸಿರುತ್ತಾರೆ ಮತ್ತು ದೇಶದಲ್ಲಿ ಪ್ರಸ್ತುತ ಲಭ್ಯವಿರುವ ದೇಶೀಯ ದಾಸ್ತಾನು ಗೃಹಬಳಕೆ ಗ್ರಾಹಕರಿಗೆ ಸಾಕಾಗುವಷ್ಟಿದ್ದು, ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬಾರದೆಂದು ತಿಳಿಸಿರುತ್ತಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಸರಬರಾಜು ವ್ಯತ್ಯಯದ ಬಗ್ಗೆ ಮಾತನಾಡಿ ಹೋಟೆಲ್, ಕ್ಯಾಟರಿಂಗ್, ಉದ್ಯಮಕ್ಕೆ ಧಕ್ಕೆಯಾಗಿ ವಿದ್ಯಾರ್ಥಿಗಳಿಗೆ, ಉದ್ಯೋಗಿಗಳಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಕಾಲದಲ್ಲಿ ಪರಿಹಾರ ಒದಗಿಸಿದ್ದಲ್ಲಿ ದಿನನಿತ್ಯ ನೂರಾರು ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ತೈಲ ಕಂಪನಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಅಲ್ಲದೇ, ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ದಾಸ್ತಾನು/ಸಾಗಾಣಿಕೆ/ ರಿಫಿಲಿಂಗ್ ಪ್ರಕರಣಗಳು ಕಂಡುಬಂದಲ್ಲಿ Essential Commodities Act, 1955 and Petroleum Products (Maintenance of Production, Storage and Supply) Order, 1999 and LPG Control Order 2000 ರಡಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ನಿರ್ದೇಶನವನ್ನು ನೀಡಲಾಗಿದೆ.

ಮುಂದುವರೆದು, ಸರ್ಕಾರದ ಮುಖ್ಯಕಾರ್ಯದರ್ಶಿಯವರು, ದಿನಾಂಕ:11.03.2026ರಂದು ಅಡುಗೆ ಅನಿಲ ಸರಬರಾಜಿನಲ್ಲಿ ಎದುರಾಗುತ್ತಿರುವ ಅಡಚಣೆಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ

ಚರ್ಚಿಸಿರುವಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಇವರ ಟಿಪ್ಪಣಿ ಸಂಖ್ಯೆ:ಮುಕಾ:140:2026, ದಿನಾಂಕ:11.03.2026ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಡಳಿತಕ್ಕೆ ಈ ಕೆಳಕಂಡಂತೆ ನಿರ್ದೇಶನವನ್ನು ನೀಡಿರುತ್ತಾರೆ:-

- ಜಿಲ್ಲಾವ್ಯಾಪ್ತಿಯಲ್ಲಿ ಗೃಹಬಳಕೆಯ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಅಕ್ರಮವಾಗಿ ದಾಸ್ತಾನು ಮಾಡುವುದನ್ನು ತಡೆಗಟ್ಟುವುದು.
- ಅನಧಿಕೃತವಾಗಿ ಗೃಹಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯದ ಉದ್ದೇಶದ ಬಳಕೆಗೆ ಸರಬರಾಜು ಮತ್ತು ಸಾಗಾಣಿಕೆ ಮಾಡುವುದನ್ನು ತಡೆಗಟ್ಟುವುದು.
- ಅಕ್ರಮವಾಗಿ ಮತ್ತು ಅನಧಿಕೃತವಾಗಿ ಗೃಹಬಳಕೆಯ ಸಿಲಿಂಡರ್‌ಗಳನ್ನು ಏಜೆನ್ಸಿಗಳು/ವ್ಯಕ್ತಿಗಳು ತಾತ್ಕಾಲಿಕವಾಗಿ ಬೇಡಿಕೆ ಸೃಷ್ಟಿಸುವಂತೆ ಮಾಡಿ, ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಗಟ್ಟುವುದು.
- ಗೃಹಬಳಕೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ರಿಫಿಲಿಂಗ್ ಮಾಡಿ ಕಡಿಮೆ ಪ್ರಮಾಣದ ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸುವುದನ್ನು ತಡೆಗಟ್ಟುವುದು.
- ಸಿಲಿಂಡರ್ ಬುಕಿಂಗ್ ನಂಬರ್ ಕಾರ್ಯನಿರ್ವಹಿಸದೇ ಇದ್ದಲ್ಲಿ, ವಾಟ್ಸ ಆಪ್ ಅಥವಾ ಇತರೆ ಮಾರ್ಗಗಳ ಮೂಲಕ ಬುಕಿಂಗ್ ಮಾಡುವ ವಿಧಾನವನ್ನು ಸಾರ್ವಜನಿಕರಿಗೆ ತಿಳಿಸುವುದು.
- ವಿತರಣೆ ಕುರಿತು ದಾಖಲಾಗುವ ದೂರುಗಳನ್ನು ದೂರವಾಣಿ ಸಂಖ್ಯೆ:112ರ ಮೂಲಕ ಸಂಗ್ರಹಿಸಿ ವಿಲೇಗೊಳಿಸುವುದು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಕ್ಷಮವಾಗಿ ನಿರ್ವಹಿಸುವುದು.

ದಿನಾಂಕ:13/3/2026ರಂದು ಸನ್ಮಾನ್ಯ ಸಚಿವರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖೆ ಇವರ ಅಧ್ಯಕ್ಷತೆಯಲ್ಲಿ ತೈಲ ಕಂಪನಿಗಳ ಸ್ಟೇಟ್ ಲೆವೆಲ್ ಕೋ-ಆರ್ಡಿನೇಟರ್, ಇತರೆ ತೈಲ ಕಂಪನಿಗಳ ಅಧಿಕಾರಿಗಳು (IOC, BPC, HPC) ಸರ್ಕಾರದ ಕಾರ್ಯದರ್ಶಿಗಳು, ಆನಾಸ&ಗ್ರಾವ್ಯ ಇಲಾಖೆ ಆಯುಕ್ತರು, ಆನಾಸ&ಗ್ರಾವ್ಯಇಲಾಖೆ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು.

ಪ್ರಸ್ತುತ ಎಲ್‌ಪಿಜಿ ಸರಬರಾಜು ಕುರಿತು ಕೇಂದ್ರ ಸರ್ಕಾರದಿಂದ ನೀಡಿರುವ ನಿರ್ದೇಶನದಂತೆ ಅತ್ಯಗತ್ಯ ಸೇವೆ ಒದಗಿಸುವ ಸಂಸ್ಥೆಗಳಾದ 1) Hospitals 2) Educational Institutions 3) Airport/Railway/bus station canteens 4) Place of Worship 5) Old age home canteens 6) Pharma Industries 7) Food processing 8) Milk processing 9) Seed processing 10) Defence/aeronautical industries ಗೆ ಎಲ್‌ಪಿಜಿ ಸೇವೆಯನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

ದಿನಾಂಕ:12/3/2026ರಂದು ಕೇಂದ್ರ ಸರ್ಕಾರವು ತಾತ್ಕಾಲಿಕವಾಗಿ ಸಾರ್ವಜನಿಕ ವಿತರಣಾ ಪದ್ಧತಿಗೆ(PDS) ಸೀಮೆಎಣ್ಣೆ(SKO) ಸರಬರಾಜು ಮಾಡಲು ಆದೇಶ ನೀಡಿದೆ. ಕರ್ನಾಟಕ ರಾಜ್ಯಕ್ಕೆ ಸುಮಾರು 2304KL ಸೀಮೆಎಣ್ಣೆಯನ್ನು ಹಂಚಿಕೆ ನೀಡಲಾಗಿರುತ್ತದೆ. ಪ್ರಸ್ತುತ ರಾಜ್ಯದ 5 ಜಿಲ್ಲೆಗಳಲ್ಲಿ ಸೀಮೆಎಣ್ಣೆ ವಿತರಣೆಯನ್ನು ಮಾಡಲಾಗುತ್ತಿದ್ದು, ಆ ಜಿಲ್ಲೆಗಳಿಗೆ ಹಂಚಿಕೆಯನ್ನು ಅವರ ಬೇಡಿಕೆಯಂತೆ ನೀಡಲಾಗುವುದು ಹಾಗೂ ಉಳಿಕೆ ಜಿಲ್ಲೆಗಳಲ್ಲಿಯೂ ಸಹ ಈ ಸಂಬಂಧ ಬೇಡಿಕೆ ಬಂದಲ್ಲಿ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.

ಬೆಂಗಳೂರಿನಲ್ಲಿರುವ ಇಂದಿರಾ ಆಹಾರ ಕ್ಯಾಂಟಿನ್ ಮತ್ತು ರಾಜ್ಯದ ಮೃಗಾಲಯಗಳು, ಪಕ್ಷಿಧಾಮಗಳು ಹಾಗೂ ಅತ್ಯಗತ್ಯವಾಗಿ ಬೇಕಾಗಿರುವ ಖಾಸಗಿ ಕಾರ್ಪೊರೇಟ್ ಕಛೇರಿಗಳಾದ ಇನ್ಫೋಸಿಸ್, ವಿಪ್ರೊ, ಬಯೋಕಾನ್ ಇತ್ಯಾದಿ ಸಂಸ್ಥೆಗಳಿಗೆ ಲಭ್ಯತೆಯ ಆಧಾರದ ಮೇಲೆ ಎಲ್ ಪಿ ಜಿ ಸೇವೆಯನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ, ದೇವಾಲಯಗಳು, ದೇವಾಲಯದ ಛತ್ರಗಳು, ಪ್ರಸಾದ ಭೋಜನ ಇಲ್ಲಿ ಸಂಪೂರ್ಣವಾಗಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯನ್ನು ನೀಡಲಾಗುತ್ತಿದೆ. ಖಾಸಗಿ ಪಿ.ಜಿ, ಹಾಸ್ಟೆಲ್ ಇಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳು ಮತ್ತು ಮನೆಬಾಡಿಗೆಯಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಇವರಿಗೆ ತಾತ್ಕಾಲಿಕವಾಗಿ ಸಮಸ್ಯೆಯಾಗಿದ್ದು, ಇವರಿಗೆ ಎಲ್‌ಪಿಜಿ ಲಭ್ಯತೆಯ ಆಧಾರದ ಮೇಲೆ ಸಂಬಂಧಿಸಿದ ಮಾಲೀಕರಿಗೆ ನೀಡಲು ಸಹ ಕ್ರಮಗಳನ್ನೂ ಸಹ ಜರುಗಿಸಲಾಗುತ್ತಿದೆ.

ಹೋಟೆಲ್, ಕ್ಯಾಂಟಿನ್, ಪಿ.ಜಿ, ಕಲ್ಯಾಣಮಂಟಪ ಇವುಗಳಿಗೆ ವಾಣಿಜ್ಯ ಸಿಲಿಂಡರ್ ಸರಬರಾಜಿನಲ್ಲಿ ವ್ಯತ್ಯಯವಾಗಿರುವುದು ವಾಸ್ತವಾಂಶವಾಗಿದ್ದು, ಈ ಸಂಬಂಧ ತೈಲಕಂಪನಿಗಳ ಅಧಿಕಾರಿಗಳು ಈಗಾಗಲೇ ದಿನಾಂಕ:12/3/2026 ರಂದು 135000 ಮೆ.ಟನ್ ಉಳ್ಳ ತೈಲ ಸರಕಿನ ಹಡಗು ಭಾರತವನ್ನು ತಲುಪಿದ್ದು, ಹಾಗೂ ಇನ್ನೆರಡು ದಿನಗಳಲ್ಲಿ ಮತ್ತೊಂದು ತೈಲ ಸರಕಿನ ಹಡಗು ಭಾರತವನ್ನು ತಲುಪಲಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಸಂಸ್ಥೆಗಳಿಗೆ ಯಾವುದೇ ವಿಳಂಬವಿಲ್ಲದೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ನೀಡಲಾಗುತ್ತಿದೆ.

ಇಂದಿರಾ ಕ್ಯಾಂಟಿನ್‌ಗಳಲ್ಲಿ ಮಧ್ಯಾಹ್ನದ ಊಟಕ್ಕೆ ಬೇಕಾಗಿರುವ ಅತ್ಯಗತ್ಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಸರಬರಾಜು ಮಾಡಲು ಕ್ರಮವಹಿಸಲಾಗಿದೆ. ದೇವಸ್ಥಾನ, ದೇವಾಲಯದ ಭೋಜನಾಲಯ, ಪ್ರಸಾದ ಕೇಂದ್ರ, ಇಲ್ಲಿ ಯಾವುದೇ ಸಮಸ್ಯೆಯಾಗದಂತೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಸರಬರಾಜು ಮಾಡಲಾಗುತ್ತಿದೆ.

ರಾಜ್ಯದಲ್ಲಿರುವ ಗೃಹ ಉಪಯೋಗಿ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಎದುರಾಗದಂತೆ ಕ್ರಮವಹಿಸಲಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಸಂಸ್ಥೆಗಳಿಗೆ ಯಾವುದೇ ವಿಳಂಬವಿಲ್ಲದೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ನೀಡಲಾಗುತ್ತಿದೆ.

ಹೋಟೆಲ್, ಕಲ್ಯಾಣಮಂಟಪಗಳು, ಪಿ.ಜಿ.ಗಳು ಮತ್ತು ಇತರೆ ಸಂಪೂರ್ಣ ವಾಣಿಜ್ಯೀಕರಣ ಇರುವ ಸ್ಥಳಗಳಲ್ಲಿ ತಕ್ಕಮಟ್ಟಿಗೆ ವಾಣಿಜ್ಯ ಅನಿಲ ಸರಬರಾಜು ವ್ಯತ್ಯಯವಾಗಿದ್ದು, ಇದನ್ನು ಪರಿಹರಿಸಲು ಕೇಂದ್ರ ಸರ್ಕಾರದ ತೈಲಕಂಪನಿಯ ಅಧಿಕಾರಿಗಳ ಜೊತೆ ನಿರಂತರ ಸಭೆಗಳನ್ನು ನಡೆಸುತ್ತಿದ್ದು, ಅವರಿಗೆ ಸೂಕ್ತ ನಿರ್ದೇಶನ ನೀಡಿ ಅತಿ ಶೀಘ್ರದಲ್ಲೇ ಸಮಸ್ಯೆಗಳನ್ನು ಪರಿಹರಿಸುವ ಸಂಬಂಧ ಕ್ರಮಗಳನ್ನು ಜರುಗಿಸಲಾಗುತ್ತಿದೆ.

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು
ಮಾಪನಶಾಸ್ತ್ರ, ಇಲಾಖಾ ಸಚಿವರು

15807 ಮು ಉ SL NO:- 47 ದಿ:-13-03-2026

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಐವಾನ್ ಡಿ ಸೋಜಾ ಇವರು ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಿರುವ ಪ್ರಶ್ನೆಗೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.**

*****

**ಪ್ರಶ್ನೆ:**

ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ವಾಣಿಜ್ಯ ಬಳಕೆ ಎಲ್.ಪಿ.ಜಿ ಸಿಲಿಂಡರ್ ಪೂರೈಕೆ ಕಳೆದ ಭಾನುವಾರದಿಂದಲೇ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಈ ಕಾರಣಕ್ಕಾಗಿ ಊಟ, ತಿಂಡಿ ತಿನಿಸು ನೀಡಲು ಹೊಟೇಲ್‌ಗಳು ಮುಚ್ಚಿದ್ದಾರೆ. ದೇವಸ್ಥಾನಗಳಲ್ಲೂ ಪ್ರಸಾದ ಭೋಜನ ಅನ್ನ ಸ್ಥಗಿತಗೊಂಡಿದೆ. ಮಂಗಳೂರು ನಗರದಲ್ಲಿ ಸೌದೆ ವ್ಯಾಪಾರಿಗಳು ಮನಸ್ಸಿಗೆ ಬಂದಂತೆ ಕಟ್ಟಿಗೆ ದರ ಏರಿಸಿ, ಕಟ್ಟಿಗೆ ಮಾರಾಟ ಮಾಡುತ್ತಿದ್ದಾರೆ. ಇದು ಮುಂದುವರಿದಲ್ಲಿ ಪರಿಸರ ಮಾಲಿನ್ಯ ಉಂಟಾಗಿ ಆರೋಗ್ಯದ ಮೇಲೆ ಪರಿಣಾಮ ಉಂಟಾಗಲಿದೆ. ಆಟೋ ರಿಕ್ಷಾಗಳಿಗೆ ಮಂಗಳೂರು ನಗರದಲ್ಲಿ ಸುಮಾರು 7 ಸಾವಿರ ಆಟೋ ರಿಕ್ಷಾಗಳಲ್ಲಿ 5 ಸಾವಿರಕ್ಕೂ ಹೆಚ್ಚು ಎಲ್.ಪಿ.ಜಿ ಗ್ಯಾಸ್ ಮೂಲಕ ಸಂಚರಿಸುತ್ತಿದ್ದು, ಎಲ್.ಪಿ.ಜಿ ಗ್ಯಾಸ್ ದೊರೆಯದೇ ಆಟೋ ರಿಕ್ಷಾ ಚಾಲಕರು ನಿರುದ್ಯೋಗಿಗಳಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅಡುಗೆ ಅನಿಲ (ಗ್ಯಾಸ್) ಮೂಲ ಬೆಲೆ ರೂ. 495/- ಕೇಂದ್ರ ಸರ್ಕಾರದ ಟ್ಯಾಕ್ಸ್ ರೂ. 24/- ಸಾಗಾಣಿಕೆ ರೂ. 10/- ಒಟ್ಟು ಮೊತ್ತ ರೂ. 529.75/- ರಾಜ್ಯ ಸರ್ಕಾರದ ಟ್ಯಾಕ್ಸ್ ರೂ. 291.36/- ರಾಜ್ಯ ಸಾಗಾಣಿಕೆ ಚಾರ್ಜ್ ರೂ.15/- ಡಿಸ್ಟ್ರಿಬ್ಯುಟರ್ಸ್ ಕಮಿಷನ್ ರೂ. 5.50/- ಸಬ್ಸಿಡಿ ರೂ. 19.57/- ಗ್ರಾಹಕರು ಕೊಡುವ ಹಣ ರೂ.861.18 ಕೇಂದ್ರ ಸರ್ಕಾರದ ಟ್ಯಾಕ್ಸ್ ಕೇವಲ 5% ರಾಜ್ಯ ಸರ್ಕಾರದ ಟ್ಯಾಕ್ಸ್ 55% ಈಗ ಅರ್ಥ ಮಾಡಿಕೊಳ್ಳಿ ಯಾರು ಗ್ಯಾಸ್ ಬೆಲೆ ಜಾಸ್ತಿ ಮಾಡಿದ್ದು? ರಾಜ್ಯ ಸರ್ಕಾರನ? ಕೇಂದ್ರ ಸರ್ಕಾರನ? ಎಂಬ ಸುಳ್ಳು ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಗೊಂಡಿರುವ ಬಗ್ಗೆ ಮಾನ್ಯ ಸಚಿವರು ತನಿಖಾ ನಡೆಸಬೇಕಾಗಿ ಒತ್ತಾಯಿಸುತ್ತೇನೆ.

ಊಟ, ತಿಂಡಿ ಇಲ್ಲದೆ ಪಿ.ಜಿ ಹಾಸ್ಟೇಲ್ ಮತ್ತು ಮನೆ ಬಾಡಿಗೆಯಲ್ಲಿ ವಾಸಿಸುತ್ತಿರುವ ಸುಮಾರು 30 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಕಾರ್ಯನಿರತರಿಗೆ ಊಟ, ತಿಂಡಿ ಇಲ್ಲದೆ ಪರದಾಡುತ್ತಿರುವ ಪರಿಸ್ಥಿತಿ ಉದ್ಭವಿಸುತ್ತಿದ್ದ, ಬದಲಿ ವ್ಯವಸ್ಥೆಯಿಂದ ಶಾಲಾ-ಕಾಲೇಜುಗಳು, ವಿಶ್ವವಿದ್ಯಾನಿಲಯಗಳಿಗೆ ರಜೆ ಘೋಷಿಸಬೇಕೆಂದು ಒತ್ತಾಯಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಗ್ಯಾಸ್ ಟ್ರಬಲ್ ಉಂಟಾದ ಸಮಸ್ಯೆಯನ್ನು ಕೂಡಲೇ ಪರಿಗಣಿಸಿ, ತಿಂಡಿ ತಿನಿಸು ಊಟ ಸಿಗುವರೆಗೂ ರಜೆ ಘೋಷಿಸಿ ಅವರಿಗೆ ಬದಲಿ ವ್ಯವಸ್ಥೆ ಮಾಡಿಕೊಡಬೇಕೆಂದು ಸದನದ ಶೂನ್ಯವೇಳೆಯಲ್ಲಿ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ರಾಜ್ಯ ಸರ್ಕಾರವು ಈಗಾಗಲೇ ಗ್ರಾಹಕರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕೆಳಕಂಡ ಸಮರ್ಪಕ ಕ್ರಮಗಳನ್ನು ಜರುಗಿಸುತ್ತಿದೆ:-

ದಿನಾಂಕ:09/03/2026ರ ಕೇಂದ್ರ ಸರ್ಕಾರದ ಆದೇಶಗಳನ್ವಯ ಎಲ್ಲಾ public sector OMC's ಗಳು ಸರಬರಾಜು ಮಾಡುವ ಎಲ್‌ಪಿಜಿ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಕೇವಲ ಗೃಹ ಬಳಕೆಯ ಗ್ರಾಹಕರಿಗೆ ಸರಬರಾಜು/ಮಾರಾಟವಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿರುತ್ತದೆ ಹಾಗೂ ಈ ಕೆಳಕಂಡ ಸೂಚನೆಗಳನ್ನು ಸಹ ನೀಡಿರುತ್ತದೆ :-

1) All domestic/SEZ oil refining companies including Petrochemical Complexes operating in India shall maximize and ensure that entire production of C3 and C4 streams including Propane, Butane, Propylene, etc being produced, recovered, fractionated or otherwise

available with them in their refinery and petrochemical complexes is utilized for production of Liquefied Petroleum Gas (LPG) pool and make it available to the three Public sector OMCs viz. IOCL, HPCL and BPCL only.

2) All oil refining companies including their Petrochemical Complexes shall not divert, utilize, process, crack, convert or otherwise employ any of the streams as mentioned in Para 1 above for manufacture of petrochemical products or other such downstream derivatives.

3) All Public sector OMCs shall ensure that LPG so procured is supplied/marketed solely to consumers of domestic LPG only.

4) Any contravention of this Order shall attract action under the Essential Commodities Act, 1955 and the Petroleum Products (Maintenance of Production, Storage and Supply) Order, 1999, and any other applicable law for the time being in force.

5) This Order supersedes this Ministry's order of even number dated 05 March 2026. This order shall come into force with immediate effect and shall remain in force until further orders of the Central Government.

ಸನ್ಮಾನ್ಯ ಮುಖ್ಯಮಂತ್ರಿಯವರು, ಈಗಾಗಲೇ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಸಚಿವರಿಗೆ ಪತ್ರ ಬರೆದಿದ್ದು, ರಾಜ್ಯದ ಹಲವಾರು ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್ ಸಂಘಗಳು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿ ಮಾಡಿವೆ ಮತ್ತು ಅನೇಕ ಸಂಸ್ಥೆಗಳು ಶೀಘ್ರದಲ್ಲೇ ಸರಬರಾಜುಗಳನ್ನು ಪುನಃಸ್ಥಾಪಿಸದಿದ್ದರೆ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಬಹುದು ಎಂದು ಕಳವಳ ವ್ಯಕ್ತಪಡಿಸುತ್ತಿವೆ. ಮಹಾನಗರಗಳಲ್ಲಿ ಪ್ರತಿದಿನ ಲಕ್ಷಾಂತರ ಜನರಿಗೆ ಸೇವೆ ಸಲ್ಲಿಸುವ ಸಣ್ಣ ರೆಸ್ಟೋರೆಂಟ್‌ಗಳು, ಮೆಸ್ ಸೌಲಭ್ಯಗಳು ಮತ್ತು ಅಡುಗೆ ಘಟಕಗಳ ದೊಡ್ಡ ಪರಿಸರ ವ್ಯವಸ್ಥೆ ಇದೆ. ತೈಲ ಮಾರುಕಟ್ಟೆ ಕಂಪನಿಗಳೊಂದಿಗೆ ನಡೆಸಿದ ಚರ್ಚೆಗಳ ಪ್ರಕಾರ, ರಾಜ್ಯದ ವಾಣಿಜ್ಯ ಎಲ್‌ಪಿಜಿ ಬೇಡಿಕೆಯನ್ನು ಸಾಂಪ್ರದಾಯಿಕವಾಗಿ ಮೂರು ಒಎಂಸಿಎಸ್-ಐಒಸಿಎಲ್ (ದಿನಕ್ಕೆ ಸುಮಾರು 500-550 ಮೆಟ್ರಿಕ್ ಟನ್), ಎಚ್‌ಪಿಸಿಎಲ್ (ದಿನಕ್ಕೆ ಸುಮಾರು 300 ಮೆಟ್ರಿಕ್ ಟನ್) ಮತ್ತು ಬಿಪಿಸಿಎಲ್ (ದಿನಕ್ಕೆ ಸುಮಾರು 230 ಮೆಟ್ರಿಕ್ ಟನ್) ಪೂರೈಕೆಯ ಮೂಲಕ ಬೆಂಬಲಿಸಲಾಗುತ್ತದೆ ಮತ್ತು ಈ ಪೂರೈಕೆಯಲ್ಲಿನ ಹಠಾತ್ ಅಡಚಣೆಯು ಈಗ ಹೋಟೆಲ್‌ಗಳು, ಅಡುಗೆ ಸಂಸ್ಥೆಗಳು ಮತ್ತು ಇತರ ವಾಣಿಜ್ಯ ಬಳಕೆದಾರರ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಅವುಗಳ ಕಾರ್ಯನಿರ್ವಹಣೆಗೆ ಯಾವುದೇ ಅಡಚಣೆ ಉಂಟಾದರೆ ಅದು ನಗರದ ದೈನಂದಿನ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ. ಕರ್ನಾಟಕ ರಾಜ್ಯವು OMCಗಳ ಎಲ್ ಪಿ ಜಿ ಉತ್ಪಾದನೆಯು ಗೃಹಬಳಕೆಯ ಗ್ರಾಹಕರಿಗೆ ಸಿಲಿಂಡರ್ ಸರಬರಾಜು ಮಾಡಲು ಆದ್ಯತೆ ಮತ್ತು ಗುರಿಯನ್ನು ಹೊಂದಿರುತ್ತದೆ, ರಾಜ್ಯದಲ್ಲಿರುವ ಮಹಾನಗರ ಪಾಲಿಕೆಗಳನ್ನು ಹೊಂದಿರುವ ನಗರಗಳಲ್ಲಿಯೂ ಸಹ ಈ ರೀತಿಯ ಚಟುವಟಿಕೆಗಳಿಗೆ ಅತೀವ ತೊಂದರೆಯಾಗಿರುತ್ತದೆ. ಈ ಸಮಸ್ಯೆಯು ತಮ್ಮ ಮನೆಗಳಿಂದ ದೂರ ವಾಸಿಸುವ ಮತ್ತು ನಿಯಮಿತ ಊಟಕ್ಕಾಗಿ ಹೋಟೆಲ್‌ಗಳು ಮತ್ತು ಮೆಸ್‌ಗಳನ್ನು ಅವಲಂಬಿಸಿರುವ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ಕೆಲಸ ಮಾಡುವ ವೃತ್ತಿಪರರ ಮೇಲೂ ಪರಿಣಾಮ ಬೀರುತ್ತದೆ. ಇದರ ಜೊತೆಗೆ, ಆಹಾರ ತಯಾರಿಕೆಗಾಗಿ ವಾಣಿಜ್ಯ LPG ಅನ್ನು ಅವಲಂಬಿಸಿರುವ ಚೌಲ್ಟ್ರಿಗಳು (ಮದುವೆ ಸಭಾಂಗಣಗಳು), ಹಾಸ್ಟೆಲ್‌ಗಳು ಮತ್ತು ಕಾರ್ಯಕ್ರಮ ಸ್ಥಳಗಳು ಸಹ ಅನಿಶ್ಚಿತತೆಯನ್ನು ಎದುರಿಸುತ್ತಿವೆ, ವಿಶೇಷವಾಗಿ ನಿಗದಿತ ಸಾಮಾಜಿಕ ಮತ್ತು ಸಮುದಾಯ ಕಾರ್ಯಕ್ರಮಗಳೊಂದಿಗೆ ಮಹಾನಗರಗಳಲ್ಲಿ ವಾಣಿಜ್ಯ ಎಲ್‌ಪಿಜಿಯ ಮೇಲಿನ ಅವಲಂಬನೆಯ

ಪ್ರಮಾಣವನ್ನು ಗಮನಿಸಿದರೆ, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಛತ್ರಗಳು, ಸಮುದಾಯ ಭವನಗಳು ಮತ್ತು ಇತರ ಯಾವುದೇ ಶುದ್ಧ ವಾಣಿಜ್ಯ ಸಂಸ್ಥೆಗಳಿಗೆ ಸಾಕಷ್ಟು ವಾಣಿಜ್ಯ ಎಲ್‌ಪಿಜಿ ಪೂರೈಕೆ ಲಭ್ಯವಾಗುವಂತೆ ನೋಡಿಕೊಳ್ಳಲು ಮಧ್ಯಪ್ರವೇಶಿಸಬೇಕೆಂದು ವಿನಂತಿಸಿರುತ್ತಾರೆ. ಆದ್ದರಿಂದ, ವಾಣಿಜ್ಯ ಚಟುವಟಿಕೆ ನಡೆಯುತ್ತಿರುವ ಸ್ಥಳಗಳಾದ ಹೋಟೆಲ್, ರೆಸ್ಟೋರೆಂಟ್, ಛತ್ರಗಳು, ಮದುವೆ ಮಂಟಪಗಳು, ಸಮುದಾಯ ಭವನಗಳು, ಮೂರನೇ ವ್ಯಕ್ತಿಯ ಏಜೆನ್ಸಿಗಳಿಂದ ಉಸ್ತುವಾರಿ ಮಾಡುತ್ತಿರುವ/ಮೇಲ್ವಿಚಾರಣೆ ನಡೆಸುತ್ತಿರುವ ಖಾಸಗಿ ಆಸ್ಪತ್ರೆಗಳು, ಇತ್ಯಾದಿ ಸ್ಥಳಗಳಿಗೆ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳನ್ನು ಸರಬರಾಜು ಮಾಡಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಂಬಂಧ ಓಎಂಸಿ ಕಂಪನಿಗಳು ಮೇಲುಸ್ತುವಾರಿಯನ್ನು ವಹಿಸಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಸರಬರಾಜಿನಲ್ಲಿ ಯಾವುದೇ ರೀತಿಯ ವ್ಯತ್ಯಯವಾಗದಂತೆ ಸೂಚಿಸಬೇಕೆಂದು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಸಚಿವರಿಗೆ ಪತ್ರದ ಮುಖಾಂತರ ಕೋರಿರುತ್ತಾರೆ.

ಅದೂ ಅಲ್ಲದೇ, ರಾಜ್ಯದ ಮಹಾನಗರ ಪಾಲಿಕೆಗಳೂ ಸೇರಿದಂತೆ ರಾಜ್ಯವ್ಯಾಪಿ ಎಲ್ಲಾ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆ ನಡೆಯುತ್ತಿರುವ ಸ್ಥಳಗಳಿಗೆ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಸರಬರಾಜು ಮಾಡುವಂತೆ ಸಂಬಂಧಿಸಿದ ಓಎಂಸಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದೂ ಸಹ ಸನ್ಮಾನ್ಯ ಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ ಇವರು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಸಚಿವರಿಗೆ ಪತ್ರದ ಮುಖಾಂತರ ಕೋರಿರುತ್ತಾರೆ.

ದಿನಾಂಕ:11/03/2026ರಂದು ಸನ್ಮಾನ್ಯ ಸಚಿವರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ತೈಲ ಕಂಪನಿಗಳ ಅಧಿಕಾರಿಗಳು (IOC, BPC, HPC & GAIL) ಸರ್ಕಾರದ ಕಾರ್ಯದರ್ಶಿ, ಆನಾಸ&ಗ್ರಾವ್ಯ ಇಲಾಖೆ, ಆಯುಕ್ತರು, ಆನಾಸ&ಗ್ರಾವ್ಯ ಇಲಾಖೆ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಗೃಹ ಉಪಯೋಗಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ಮತ್ತು ಗ್ರಾಹಕರಿಗೆ ಯಾವುದೇ ತೀವ್ರ ಸಮಸ್ಯೆ ಇಲ್ಲದ ಬಗ್ಗೆ ತೈಲ ಕಂಪನಿ ಅಧಿಕಾರಿಗಳಿಂದ ಖಾತ್ರಿಪಡಿಸಿಕೊಂಡಿರುತ್ತಾರೆ. ಕೊಲ್ಲಿ ರಾಷ್ಟ್ರಗಳ ಯುದ್ಧ ಸಂದರ್ಭದಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಸರಬರಾಜು ಕಡಿಮೆಯಾಗಿರುತ್ತದೆ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಗೃಹ ಉಪಯೋಗಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕ್ರಮವಹಿಸಲು ಎಲ್ಲಾ ತೈಲ ಕಂಪನಿ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿರುತ್ತಾರೆ. ಅನಿಲ ಸಿಲಿಂಡರ್‌ಗಳ ಸರಬರಾಜು ಕುರಿತು ಪ್ರತಿದಿನ ನಿಗಾವಹಿಸಿ ವಾರಕ್ಕೊಮ್ಮೆ ತೈಲ ಕಂಪನಿಗಳ ಅಧಿಕಾರಿಗಳು ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಸಭೆ ಕರೆದು ಪ್ರಗತಿ ಪರಿಶೀಲಿಸಲು ಸರ್ಕಾರದ ಕಾರ್ಯದರ್ಶಿಯವರಿಗೆ ಸೂಚನೆಯನ್ನು ನೀಡಿರುತ್ತಾರೆ.

ಈ ಸಂಬಂಧ ಮಾನ್ಯ ಸಚಿವರು ಪತ್ರಿಕಾಗೋಷ್ಠಿಯನ್ನು ನಡೆಸಿ, ರಾಜ್ಯದ ಎಲ್ಲಾ ಗ್ರಾಹಕರು ಎಲ್ ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಮತ್ತು ಇದರಿಂದ ಮಾರುಕಟ್ಟೆಯಲ್ಲಿ ಕೃತಕ ಬೇಡಿಕೆ ಸೃಷ್ಟಿಯಾಗದಂತೆ, ಸಮರ್ಪಕವಾಗಿ ಎಲ್‌ಪಿಜಿ ಅನಿಲವನ್ನು ಸಮತೋಲನವಾಗಿ ಬಳಕೆ ಮಾಡಲು ತಿಳಿಸಿರುತ್ತಾರೆ ಮತ್ತು ದೇಶದಲ್ಲಿ ಪ್ರಸ್ತುತ ಲಭ್ಯವಿರುವ ದೇಶೀಯ ದಾಸ್ತಾನು ಗೃಹಬಳಕೆ ಗ್ರಾಹಕರಿಗೆ ಸಾಕಾಗುವಷ್ಟಿದ್ದು, ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬಾರದೆಂದು ತಿಳಿಸಿರುತ್ತಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಸರಬರಾಜು ವ್ಯತ್ಯಯದ ಬಗ್ಗೆ ಮಾತನಾಡಿ ಹೋಟೆಲ್, ಕ್ಯಾಟರಿಂಗ್, ಉದ್ಯಮಕ್ಕೆ ಧಕ್ಕೆಯಾಗಿ ವಿದ್ಯಾರ್ಥಿಗಳಿಗೆ, ಉದ್ಯೋಗಿಗಳಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಕಾಲದಲ್ಲಿ ಪರಿಹಾರ ಒದಗಿಸಿದ್ದಲ್ಲಿ ದಿನನಿತ್ಯ ನೂರಾರು ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ತೈಲ ಕಂಪನಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

ಅಲ್ಲದೇ, ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ದಾಸ್ತಾನು/ಸಾಗಾಣಿಕೆ/ ರಿಫಿಲಿಂಗ್ ಪ್ರಕರಣಗಳು ಕಂಡುಬಂದಲ್ಲಿ, Essential Commodities Act, 1955 and Petroleum Products (Maintenance of Production, Storage and Supply) Order, 1999 and LPG Control Order 2000 ರಡಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ನಿರ್ದೇಶನವನ್ನು ನೀಡಲಾಗಿದೆ.

ಮುಂದುವರೆದು, ಸರ್ಕಾರದ ಮುಖ್ಯಕಾರ್ಯದರ್ಶಿಯವರು, ದಿನಾಂಕ:11.03.2026ರಂದು ಅಡುಗೆ ಅನಿಲ ಸರಬರಾಜಿನಲ್ಲಿ ಎದುರಾಗುತ್ತಿರುವ ಅಡಚಣೆಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಚರ್ಚಿಸಿರುವಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಇವರ ಟಿಪ್ಪಣಿ ಸಂಖ್ಯೆ:ಮುಕಾ:140:2026, ದಿನಾಂಕ:11.03.2026ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಡಳಿತಕ್ಕೆ ಈ ಕೆಳಕಂಡಂತೆ ನಿರ್ದೇಶನವನ್ನು ನೀಡಿರುತ್ತಾರೆ:-

- ಜಿಲ್ಲಾವ್ಯಾಪ್ತಿಯಲ್ಲಿ ಗೃಹಬಳಕೆಯ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಅಕ್ರಮವಾಗಿ ದಾಸ್ತಾನು ಮಾಡುವುದನ್ನು ತಡೆಗಟ್ಟುವುದು.
- ಅನಧಿಕೃತವಾಗಿ ಗೃಹಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯದ ಉದ್ದೇಶದ ಬಳಕೆಗೆ ಸರಬರಾಜು ಮತ್ತು ಸಾಗಾಣಿಕೆ ಮಾಡುವುದನ್ನು ತಡೆಗಟ್ಟುವುದು.
- ಅಕ್ರಮವಾಗಿ ಮತ್ತು ಅನಧಿಕೃತವಾಗಿ ಗೃಹಬಳಕೆಯ ಸಿಲಿಂಡರ್‌ಗಳನ್ನು ಏಜೆನ್ಸಿಗಳು/ವ್ಯಕ್ತಿಗಳು ತಾತ್ಕಾಲಿಕವಾಗಿ ಬೇಡಿಕೆ ಹೆಚ್ಚುವಂತೆ ಮಾಡಿ, ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಗಟ್ಟುವುದು.
- ಗೃಹಬಳಕೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ರಿಫಿಲಿಂಗ್ ಮಾಡಿ ಕಡಿಮೆ ಪ್ರಮಾಣದ ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸುವುದನ್ನು ತಡೆಗಟ್ಟುವುದು.
- ಸಿಲಿಂಡರ್ ಬುಕಿಂಗ್ ನಂಬರ್ ಕಾರ್ಯನಿರ್ವಹಿಸದೇ ಇದ್ದಲ್ಲಿ, ವಾಟ್ಸ ಆಪ್ ಅಥವಾ ಇತರೆ ಮಾರ್ಗಗಳ ಮೂಲಕ ಬುಕಿಂಗ್ ಮಾಡುವ ವಿಧಾನವನ್ನು ಸಾರ್ವಜನಿಕರಿಗೆ ತಿಳಿಸುವುದು.
- ವಿತರಣೆ ಕುರಿತು ದಾಖಲಾಗುವ ದೂರುಗಳನ್ನು ದೂರವಾಣಿ ಸಂಖ್ಯೆ:112ರ ಮೂಲಕ ಸಂಗ್ರಹಿಸಿ ವಿಲೇಗೊಳಿಸುವುದು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಕ್ಷಮವಾಗಿ ನಿರ್ವಹಿಸುವುದು.

ದಿನಾಂಕ:13/3/2026ರಂದು ಸನ್ಮಾನ್ಯ ಸಚಿವರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ತೈಲ ಕಂಪನಿಗಳ ಸ್ಟೇಟ್ ಲೆವೆಲ್ ಕೋ-ಆರ್ಡಿನೇಟರ್, ಇತರೆ ತೈಲ ಕಂಪನಿಗಳ ಅಧಿಕಾರಿಗಳು (IOC, BPC, HPC) ಸರ್ಕಾರದ ಕಾರ್ಯದರ್ಶಿಗಳು, ಆನಾಸ&ಗ್ರಾವ್ಯ ಇಲಾಖೆ ಆಯುಕ್ತರು, ಆನಾಸ&ಗ್ರಾವ್ಯಇಲಾಖೆ ಮತ್ತು ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು.

ಪ್ರಸ್ತುತ ಎಲ್‌ಪಿಜಿ ಸರಬರಾಜು ಕುರಿತು ಕೇಂದ್ರ ಸರ್ಕಾರದಿಂದ ನೀಡಿರುವ ನಿರ್ದೇಶನದಂತೆ ಅತ್ಯಗತ್ಯ ಸೇವೆ ಒದಗಿಸುವ ಸಂಸ್ಥೆಗಳಾದ 1) Hospitals 2) Educational Institutions 3) Airport/Railway/bus station canteens 4) Place of Worship 5) Old age home canteens 6) Pharma Industries 7) Food processing 8) Milk processing 9) Seed processing 10) Defence/aeronautical industries ಗೆ ಎಲ್‌ಪಿಜಿ ಸೇವೆಯನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

ದಿನಾಂಕ:12/3/2026ರಂದು ಕೇಂದ್ರ ಸರ್ಕಾರವು ತಾತ್ಕಾಲಿಕವಾಗಿ ಸಾರ್ವಜನಿಕ ವಿತರಣಾ ಪದ್ಧತಿಗೆ(PDS) ಸೀಮೆಎಣ್ಣೆ(SKO) ಸರಬರಾಜು ಮಾಡಲು ಆದೇಶ ನೀಡಿದೆ. ಕರ್ನಾಟಕ ರಾಜ್ಯಕ್ಕೆ ಸುಮಾರು 2304KL ಸೀಮೆಎಣ್ಣೆಯನ್ನು ಹಂಚಿಕೆ ನೀಡಲಾಗಿರುತ್ತದೆ. ಪ್ರಸ್ತುತ ರಾಜ್ಯದ 5 ಜಿಲ್ಲೆಗಳಲ್ಲಿ ಸೀಮೆಎಣ್ಣೆ ವಿತರಣೆಯನ್ನು ಮಾಡಲಾಗುತ್ತಿದ್ದು, ಆ ಜಿಲ್ಲೆಗಳಿಗೆ ಹಂಚಿಕೆಯನ್ನು ಅವರ ಬೇಡಿಕೆಯಂತೆ ನೀಡಲಾಗುವುದು ಹಾಗೂ ಉಳಿಕೆ ಜಿಲ್ಲೆಗಳಲ್ಲಿಯೂ ಸಹ ಈ ಸಂಬಂಧ ಬೇಡಿಕೆ ಬಂದಲ್ಲಿ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.

ಬೆಂಗಳೂರಿನಲ್ಲಿರುವ ಇಂದಿರಾ ಆಹಾರ ಕ್ಯಾಂಟಿನ್ ಮತ್ತು ರಾಜ್ಯದ ಮೃಗಾಲಯಗಳು, ಪಕ್ಷಿಧಾಮಗಳು ಹಾಗೂ ಅತ್ಯಗತ್ಯವಾಗಿ ಬೇಕಾಗಿರುವ ಖಾಸಗಿ ಕಾರ್ಪೋರೇಟ್ ಕಛೇರಿಗಳಾದ ಇನ್ಫೋಸಿಸ್, ವಿಪ್ರೊ, ಬಯೋಕಾನ್ ಇತ್ಯಾದಿ ಸಂಸ್ಥೆಗಳಿಗೆ ಲಭ್ಯತೆಯ ಆಧಾರದ ಮೇಲೆ ಎಲ್ ಪಿ ಜಿ ಸೇವೆಯನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯ, ದೇವಾಲಯಗಳು, ದೇವಾಲಯದ ಛತ್ರಗಳು, ಪ್ರಸಾದ ಭೋಜನ ಇಲ್ಲಿ ಸಂಪೂರ್ಣವಾಗಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯನ್ನು ನೀಡಲಾಗುತ್ತಿದೆ. ಖಾಸಗಿ ಪಿ.ಜಿ, ಹಾಸ್ಟೆಲ್ ಇಲ್ಲಿ ವಾಸ ಮಾಡುತ್ತಿರುವ ವಿದ್ಯಾರ್ಥಿಗಳು ಮತ್ತು ಮನೆಬಾಡಿಗೆಯಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಇವರಿಗೆ ತಾತ್ಕಾಲಿಕವಾಗಿ ಸಮಸ್ಯೆಯಾಗಿದ್ದು ಇವರಿಗೆ ಎಲ್‌ಪಿಜಿ ಲಭ್ಯತೆಯ ಆಧಾರದ ಮೇಲೆ ಸಂಬಂಧಿಸಿದ ಮಾಲೀಕರಿಗೆ ನೀಡಲು ಸಹ ಕ್ರಮಗಳನ್ನೂ ಸಹ ಜರುಗಿಸಲಾಗುತ್ತಿದೆ.

ಹೋಟೆಲ್, ಕ್ಯಾಂಟಿನ್, ಪಿ.ಜಿ, ಕಲ್ಯಾಣಮಂಟಪ ಇವುಗಳಿಗೆ ವಾಣಿಜ್ಯ ಸಿಲಿಂಡರ್ ಸರಬರಾಜಿನಲ್ಲಿ ವ್ಯತ್ಯಯವಾಗಿರುವುದು ವಾಸ್ತವಾಂಶವಾಗಿದ್ದು, ಈ ಸಂಬಂಧ ತೈಲಕಂಪನಿಗಳ ಅಧಿಕಾರಿಗಳು ಈಗಾಗಲೇ ದಿನಾಂಕ:12/3/2026 ರಂದು 135000 ಮೆ.ಟನ್ ಉಳ್ಳ ತೈಲ ಸರಕಿನ ಹಡಗು ಭಾರತವನ್ನು ತಲುಪಿದ್ದು, ಹಾಗೂ ಇನ್ನೆರಡು ದಿನಗಳಲ್ಲಿ ಮತ್ತೊಂದು ತೈಲ ಸರಕಿನ ಹಡಗು ಭಾರತವನ್ನು ತಲುಪಲಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, ಪ್ರಸ್ತುತ ಸನ್ನಿವೇಶದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಸಂಸ್ಥೆಗಳಿಗೆ ಯಾವುದೇ ವಿಳಂಬವಿಲ್ಲದೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ನೀಡಲಾಗುತ್ತಿದೆ.

ಹೋಟೆಲ್, ಕಲ್ಯಾಣಮಂಟಪಗಳು, ಪಿ.ಜಿ.ಗಳು ಮತ್ತು ಇತರೆ ಸಂಪೂರ್ಣ ವಾಣಿಜ್ಯೀಕರಣ ಇರುವ ಸ್ಥಳಗಳಲ್ಲಿ ತಕ್ಕಮಟ್ಟಿಗೆ ವಾಣಿಜ್ಯ ಅನಿಲ ಸರಬರಾಜು ವ್ಯತ್ಯಯವಾಗಿದ್ದು, ಇದನ್ನು ಪರಿಹರಿಸಲು ಕೇಂದ್ರ ಸರ್ಕಾರದ ತೈಲಕಂಪನಿಯ ಅಧಿಕಾರಿಗಳ ಜೊತೆ ನಿರಂತರ ಸಭೆಗಳನ್ನು ನಡೆಸುತ್ತಿದ್ದು, ಅವರಿಗೆ ಸೂಕ್ತ ನಿರ್ದೇಶನ ನೀಡಿ ಅತಿ ಶೀಘ್ರದಲ್ಲೇ ಸಮಸ್ಯೆಗಳನ್ನು ಪರಿಹರಿಸುವ ಸಂಬಂಧ ಕ್ರಮಗಳನ್ನು ಜರುಗಿಸಲಾಗುತ್ತಿದೆ.

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು
ಮಾಪನಶಾಸ್ತ್ರ, ಇಲಾಖಾ ಸಚಿವರು